

# ಪುಸ್ತಕ ಪರಿಚಯ

**ತಾಯಿ, ಆಸೆ -ನಿರಾಸೆ, ಸಂಸ್ಕೃತಿ,**
**ಸುಖ-ದುಃಖ, ಸಂಗೀತ,**
**ಜೀವನ, ಬದುಕು-ಬಾಳು,**
**ಮನದ ಮುಕುರ ಮಾತು**
**ಸಂಗ್ರಹಕಾರರು : ಶ್ರೀ ಟಿ.ವಿ. ವೆಂಕಟರಮಣಯ್ಯ**
***ಮೇಲಿನ ಪುಸ್ತಕಗಳು ದೊರಕುವ ಸ್ಥಳ:***
**ಶ್ರೀ ಟಿ.ವಿ. ವೆಂಕಟರಮಣಯ್ಯ, ನಂ.3,**
**ಬಿ.ಸಿ.ಸಿ. ಬ್ಯಾಂಕ್ ಆವರಣ, ಪಂಪ ಮಹಾಕವಿ ರಸ್ತೆ**
**ಚಾಮರಾಜಪೇಟೆ, ಬೆಂಗಳೂರು 560 018**

ಈ ಮೇಲಿನ ಪುಸ್ತಿಕೆಗಳು ವಿವಿಧ ವಿಷಯಗಳಿಗೆ ಸಂಬಂಧಿಸಿದ ಸೂಕ್ತಿಸಂಗ್ರಹವಾಗಿವೆ. ಸಂಗ್ರಹಕಾರರಾದ ಶ್ರೀ ಟಿ.ವಿ ವೆಂಕಟರಮಣಯ್ಯನವರು ವಿವಿಧ ಗ್ರಂಥಗಳಿಂದ ಸೂಕ್ತಿಗಳನ್ನು ಸಂಗ್ರಹಿಸಿರುವರು.

ವಿಶ್ವದ ಶ್ರೇಷ್ಠ ಚಿಂತಕರಿಂದ ಹಿಡಿದು ಕನ್ನಡದ ಪ್ರಸಿದ್ಧ ಸಾಹಿತಿಗಳವರೆಗೆ ಅನೇಕ ವ್ಯಕ್ತಿಗಳ ಸೂಕ್ತಿಗಳ ಸಂಗ್ರಹ ಈ ಗ್ರಂಥಗಳಲ್ಲಿವೆ. ಲೇಖಕರು ಮತ್ತು ಉಪನ್ಯಾಸಕರು ತಮ್ಮ ತಮ್ಮ ವಿಷಯಕ್ಕೆ ಸಂಬಂಧಿಸಿದಂತೆ ಶ್ರೇಷ್ಠ ಉಕ್ತಿಗಳನ್ನು ಇವುಗಳಿಂದ ಆರಿಸಿಕೊಳ್ಳಬಹುದು. ಹಾಗೆಯೇ ಸುಮ್ಮನೆ ಕುಳಿತುಕೊಂಡಾಗ ಈ ಪುಸ್ತಿಕೆಗಳನ್ನು ತಿರುವಿಹಾಕುತ್ತಿದ್ದರೆ ಮನಸ್ಸಿಗೆ ಶಾಂತಿ ನೀಡುವ, ವಿವೇಕ ವನ್ನು ಜಾಗ್ರತಗೊಳಿಸುವ, ಆಗಾಗ ಮೆಲುಕುಹಾಕಬೇಕೆನ್ನಿಸುವ, ಹೃದಯಕ್ಕೆ ತಾಕುವ ಮತ್ತು ಚಿಂತನೆಯನ್ನು ಕೆರಳಿಸುವ ಅನೇಕ ಹೇಳಿಕೆಗಳು ನಮಗೆ ದೊರೆಯುತ್ತವೆ.

ಈ ಗ್ರಂಥಗಳ ಬಗ್ಗೆ ಡಾ. ಸಿ.ಪಿ.ಕೆ ಅವರ ಮಾತು ಇವುಗಳ ಮೌಲ್ಯವನ್ನು ಎತ್ತಿ ಸಾರುತ್ತವೆ: "ವೆಂಕಟರಮಣಯ್ಯನವರು ನಾಡಿನ ಅಭಿನಂದನೆಗೆ, ಅಂತೆಯೇ ಕೃತಜ್ಞತೆಗೆ ಪಾತ್ರರು. ಅವರ ಕಾರ್ಯ ಎಲ್ಲ ರೀತಿಯಲ್ಲೂ ಪ್ರೋತ್ಸಾಹಯೋಗ್ಯ ಕೂಡ. ಅವರ ಈ ಸೂಕ್ತಿ ಕೈಂಕರ್ಯಗಳಿನ್ನೂ ಮಿಗಿಲಾಗಿ, ಮಾರ್ಗದರ್ಶಕವಾಗಿ ಸಾಗಲಿ ಎಂಬುದು ಎಲ್ಲರ ಹಾರೈಕೆ."

**–ಸಂಪಾದಕರು**

**ತ್ರಿವೇಣಿ-ಸಂಗಮ**
**ಲೇಖಕರು : ಸ್ವಾಮಿ ರಾಘವೇಶಾನಂದ**
**ಪ್ರಕಾಶಕರು :**
**ಬದರಿಕಾಶ್ರಮ, ಮಾದಿಹಳ್ಳಿ, ತುರುವೇಕೆರೆ ತಾಲ್ಲೋಕು,**
**ತುಮಕೂರು ಜಿಲ್ಲೆ. ಪುಟಗಳು : ೧೩೫**

ಮಾದಿಹಳ್ಳಿಯಲ್ಲಿರುವ ಬದರಿಕಾಶ್ರಮದಲ್ಲಿ ಶ್ರೀರಾಮಕೃಷ್ಣರ ನೂತನ ಮಂದಿರದ ಉದ್ಘಾಟನೆಯ ಸಮಾರಂಭದಲ್ಲಿ ಬಿಡುಗಡೆ ಮಾಡಿರುವ ಪುಸ್ತಕವಿದು. ಬೆಂಗಳೂರು ಅಲಸೂರಿನ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದರು, ಸರಳ ಹಾಗೂ ಮನೋಜ್ಞವಾದ ಭಾಷೆಯಲ್ಲಿ, ನೂತನ ಯುಗದ ಆಧ್ಯಾತ್ಮಿಕ ತ್ರಿವೇಣಿ ಸಂಗಮದ ಮೂರು ನದಿಗಳಾದ, ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾ ದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳನ್ನು ಬರೆದಿದ್ದಾರೆ.

ಒಂದೇ ಪುಸ್ತಕದಲ್ಲಿ ದಿವ್ಯತ್ರಯರ ಜೀವನ ಮತ್ತು ಸಂದೇಶಗಳನ್ನು ಸಂಗ್ರಹಮಾಡುವುದು, ಅದರಲ್ಲೂ ಕೇವಲ ೧೩೫ ಪುಟಗಳಲ್ಲಿ, ಕಷ್ಟಸಾಧ್ಯವೇ ಸರಿ. ಅಂತಹ ಭಗೀರಥ ಕಾರ್ಯವನ್ನು ಕೈಗೊಂಡು, ದಿವ್ಯತ್ರಯರ ಆಶೀರ್ವಾದರೂಪದ ತ್ರಿವೇಣಿ ಸಂಗಮವನ್ನು ನಮಗೆ ಹರಿಸಿದ್ದಾರೆ ಸ್ವಾಮಿ ರಾಘವೇಶಾನಂದರು. ಸುಂದರ ಮುಖಪುಟ, ಉತ್ತಮಮಟ್ಟದ ಮುದ್ರಣ ಮತ್ತು ಕಾಗದಗಳು ಪುಸ್ತಕಕ್ಕೆ ಮೆರಗು ನೀಡಿವೆ.

–ಸ್ವಾ.ವಿ.

**The Compassionate Mother**
**Sri Sri Sarada Devi**
**ಲೇಖಕರು : ಸ್ವಾಮಿ ತನ್ಮಯಾನಂದ**
**ಪ್ರಕಾಶಕರು :**
**ಶ್ರೀರಾಮಕೃಷ್ಣ ಶಾರದಾ ಸಂಘ, ಮಲೇಷಿಯಾ**
**ಪುಟಗಳು : ೩೮೭ ಬೆಲೆ: ರೂ.೧೦೦**

ಶ್ರೀಮಾತೆಯವರ ಪವಿತ್ರಜೀವನವನ್ನು ಕುರಿತು ಬಂಗಾಳಿ ಭಾಷೆಯಲ್ಲಿ ಹಲವು ಕೃತಿಗಳು ಬಂದಿದ್ದರೂ, ಅವುಗಳಲ್ಲಿ ಇರುವ ಎಲ್ಲ ವಿಷಯಗಳೂ ಇತರ ಭಾಷೆಯ ಭಕ್ತರಿಗೆ ಲಭ್ಯವಿಲ್ಲ. ಆ ಕೊರತೆಯನ್ನು ಸ್ವಾಮಿ ತನ್ಮಯಾನಂದಜಿ ಅವರು ಸಂಗ್ರಹಿಸಿರುವ ಈ ಗ್ರಂಥವು ಬಹುತೇಕ ತುಂಬಿದೆ ಎಂದು ಹೇಳಬಹುದು. ಬಂಗಾಳಿಯಲ್ಲಿ ಬ್ರಹ್ಮಚಾರಿ ಅಕ್ಷಯ ಚೈತನ್ಯರು ಬರೆದಿರುವ ಶ್ರೀಮಾತೆಯವರ ಜೀವನಚರಿತ್ರೆಯು ಬಹು ಪ್ರಸಿದ್ಧವಾದುದು. ಅದನ್ನು ಮತ್ತು ಇತರ ಹತ್ತುಹಲವು ಬಂಗಾಳಿ ಮತ್ತು ಆಂಗ್ಲ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು, ಶ್ರೀಮಾತೆಯವರ ಜೀವನವನ್ನು ಹೃದಯಸ್ಪರ್ಶಿಯಾಗಿ ನಮ್ಮ ಮುಂದೆ ಇಟ್ಟಿದ್ದಾರೆ.

ಈ ಪುಸ್ತಕವು ಶ್ರೀಮಾತೆಯವರ ದಿವ್ಯತೆಯನ್ನು ಎತ್ತಿಹಿಡಿದು, ಅವರ ಮೇಲಿನ ಭಕ್ತಿಶ್ರದ್ಧೆಗಳನ್ನು ಹೆಚ್ಚಿಸಲೆಂದೇ ರಚಿಸಿದ್ದು ಎಂದು ಲೇಖಕರು ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ. ಈ ಪುಸ್ತಕದ ಪುಟಪುಟಗಳಲ್ಲಿ ಈ ಅಂಶ ವ್ಯಕ್ತವಾಗುತ್ತಿರುವುದನ್ನು ಕಾಣುತ್ತೇವೆ.

ಪ್ರತಿಯೊಂದು ಅಧ್ಯಾಯವೂ ಶ್ರೀಮಾತೆಯವರ ಜೀವನದ ಅಥವಾ ಅವರ ಪವಿತ್ರವ್ಯಕ್ತಿತ್ವದ ಒಂದು ಅಂಶವನ್ನು ನಮಗೆ ಪರಿಚಯಿಸುತ್ತದೆ. ಭಾಷೆ ಅತ್ಯಂತ ಸರಳವಾಗಿದ್ದು, ಸಣ್ಣ ಸಣ್ಣ ಅಧ್ಯಾಯಗಳು ಇರುವುದರಿಂದ, ಓದುಗರ ಕುತೂಹಲವನ್ನು ಕೆರಳಿಸುತ್ತವೆ. ದಿವ್ಯತ್ರಯರ ಸಾಹಿತ್ಯ ಸಿಂಧುವಿನಲ್ಲಿ ಇದೊಂದು ಸ್ವಾಗತಾರ್ಹವಾದ ಹೊಸ ಸೇರ್ಪಡೆಯಾಗಿದೆ.

–ಸ್ವಾ.ವಿ.